## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ.9/2023**

**ಚಾಸಾಃ1/ಫ್ರಾಸಾಃ 1**

**ದಿನಾಂಕಃ 03-09-2024**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ದುಂಡಯ್ಯ ಹಿರೇಮಠ |
| ತಂದೆ/ಗಂಡನ ಹೆಸರು | ಮರಯ್ಯ |
| ವಯಸ್ಸು | 44 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ಸುನ್ನಾಳ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನನಗೆ ಚಾಸಾ-2 ರಿಂದ 7 ಮತ್ತು ಆರೋಪಿತರ ಪರಿಚಯ ಇದೆ. ಆರೋಪಿತನನ್ನು ಅಪಘಾತದ ಮಾರನೇ ದಿನ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ದಿ.30-07-2022 ರಂದು ಸಂಜೆ 4-00 ರಿಂದ 5-00 ಗಂಟೆಯ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ, ಚಾಸಾ-5 ರವರು ಕರೆ ಮಾಡಿ ಚಾಸಾ-6 ರವರಿಗೆ ಅಪಘಾತವಾಗಿರುವ ಬಗ್ಗೆ ತಿಳಿಸಿರುತ್ತಾರೆ. ಕೂಡಲೇ ನಾನು ಚಾಸಾ-6 ರವರ ಹೆಂಡತಿಗೆ ಕರೆ ಮಾಡಿ, ವಿಚಾರಿಸಿದಾಗ ಚಾಸಾ-6 ರವರನ್ನು ಬಾಗಲಕೋಟೆ ಆಸ್ಪತ್ರೆಗೆ ದಾಖಲಿಸಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ಮಾಹಿತಿಯ ಪ್ರಕಾರ, ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ-6 ರವರನ್ನು ಒಳರೋಗಿಯಾಗಿ ದಾಖಲಿಸಿದ್ದು, ಅವರಿಗೆ ಗಾಯಗಳಾಗಿದ್ದು. ಘಟನೆಯ ಕುರಿತು ಚಾಸಾ-6 ರವರನ್ನು ವಿಚಾರಿಸಿದಾಗ ಕುಳಗೇರಿ ಗ್ರಾಮದಲ್ಲಿ ಇರುವ ತಮ್ಮ ಜಮೀನುಗಳಿಗೆ ಗೊಬ್ಬರ ತರಲು, ತಮ್ಮ ಬೈಕ್ ಮೇಲೆ ನರಗುಂದ ಪಟ್ಟಣದಲ್ಲಿ ಬರುತ್ತಿದ್ದಾಗ ಕೊಣ್ಣೂರು ಗ್ರಾಮದ ಗುಜಮಾಗಡಿ ಪೆಟ್ರೋಲ್ ಬಂಕ್ ಹತ್ತಿರ ಹುಬ್ಬಳ್ಳಿ ಕಡೆಯಿಂದ ಬಾಗಲಕೋಟೆ ಕಡೆಗೆ ಹೋಗುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ ನಂ.ಕೆಎ 33/ಎಫ್ -0407 ನೇದ್ದನ್ನು ಅದರ ಚಾಲನಕನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರಿಂದ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ.

ಮಾರನೇ ದಿನ ನಾನು ಸದರಿ ಬಸ್ ಚಾಲಕನ ವಿರುದ್ಧ ದೂರು ಸಲ್ಲಿಸಿರುತ್ತೇನೆ. ಸದರಿ ದೂರನ್ನು

ನಿಪಿ–1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ದಿ.02–08–2022 ರಂದು ಮಧ್ಯಾಹ್ನ 12–00 ಗಂಟೆಯ ಸಮಯದಲ್ಲಿ ಪೊಲೀಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಸಾರ್ವಜನಿಕರು ನನಗೆ ನೀಡಿದ್ದ ಮಾಹಿತಿಯ ಪ್ರಕಾರ, ನಾನು ಪೊಲೀಸರಿಗೆ ಅಪಘಾತ ಸ್ಥಳವನ್ನು ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ಸ್ಥಳ ಮಹಜರ್ ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ–2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಆ ಸಮಯಲ್ಲಿ ಪೊಲೀಸರು ಘಟನಾ ಸ್ಥಳದ ಪೋಟೊ ತೆಗೆದಿರುತ್ತಾರೆ. ಸದರಿ ಪೋಟೊವನ್ನು ನಿಪಿ–3 ಎಂದು ಗುರುತಿಸಲಾಯಿತು.

ನಂತರ, ಅದೇ ದಿನ ಪೊಲೀಸರು ನನ್ನನ್ನು ಕೊಣ್ಣೂರು ಹೊರಠಾಣೆಗೆ ಕರೆದುಕೊಂಡು ಹೋಗಿ, ಮಧ್ಯಾಹ್ನ 3–00 ರಿಂದ 4–00 ಗಂಟೆಯ ಸಮಯದಲ್ಲಿ ಚಾಸಾ–6 ರವರ ಬೈಕ್ ನ್ನು ನಿಲ್ಲಿಸಿ ಅದರೊಂದಿಗೆ ನನ್ನ ಪೋಟೊ ಪಡೆದಿರುತ್ತಾರೆ. ಸದರಿ ಪೋಟೊವನ್ನು ನಿಪಿ–4 ಎಂದು ಗುರುತಿಸಲಾಯಿತು. ದಿ.08–08–2022 ರಂದು ನರಗುಂದ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿದ್ದರು.

**(ಈ ಹಂತದಲ್ಲಿ ಮುಖ್ಯ ವಿಚಾರಣೆಯನ್ನು ಪರಿಗಣಿಸಿ ಅಭಿಯೋಜನೆ ಪರ ವಕೀಲರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ

ದಿ.08–08–2022 ರಂದು ನರಗುಂದ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿ ಅಪಘಾತ ಮಾಡಿದ ಬಸ್ ಚಾಲಕನನ್ನು ತೋರಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತನು ಅಪಘಾತದ ಬಗ್ಗೆ ಹಾಗೂ ತನ್ನ ತಪ್ಪಿನ ಬಗ್ಗೆ ತಿಳಿಸಿರುತ್ತಾನೆ ಎಂದರೆ ಸರಿ. ಈ ಎಲ್ಲ ವಿಷಯಗಳ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿ.02–08–2024 ರಂದು ಕೊಣ್ಣೂರು ಪೊಲೀಸ್ ಠಾಣೆಯ ಆವರಣದಲ್ಲಿ ಮಧ್ಯಾಹ್ನ 2–00 ರಿಂದ 3–00 ಗಂಟೆಯವರೆಗೆ ಜಪ್ತು ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ನಿಪಿ–5 ಎಂದು ಗುರುತಿಸಲಾಯಿತು. ಆ ಕುರಿತು ನಿಪಿ–4 ಪೋಟೊ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ. ಆರ್ ಟಿ ಸಿ 1 ನೇ ಆರೋಪಿತನ ಪರ ವಕೀಲರಿಂದ**

ಅಪಘಾತದ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆನು. ಕಾರಣ, ಅಪಘಾತದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಕೊಣ್ಣೂರು ಗ್ರಾಮದ ವ್ಯಾಪ್ತಿಯದಲ್ಲಿ ಇರುವ ಸಂಪೂರ್ಣ ರಸ್ತೆ ದುರಸ್ಥಿತಿಯಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ವಿಷಯಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸದರಿ ಪೆಟ್ರೋಲ್ ಬಂಕ್ ಎದುರುಗಡೆ ಬ್ಯಾಂಕ್ ಇರುವ ಬಗ್ಗೆ ಗೊತ್ತಿಲ್ಲ. ಕಾರಣ, ಅಪಘಾತ ಸ್ಥಳದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಅಕ್ಕಪಕ್ಕ ಸಾಕಷ್ಟು ಅಂಗಡಿಗಳು ಹಾಗೂ ಮಾರುಕಟ್ಟೆ ಇರುವುದರಿಂದ ಯಾವಾಗಲೂ ಜನಸಂಧನಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಅಂದಾಜು 100 ರಿಂದ 120 ಅಡಿ ಅಗಲವಾಗಿದೆ ಎಂದರೆ ಸರಿ. ಕಾರಣ, ಸದರಿ ರಸ್ತೆಯ ಮೇಲೆ ಹೆಚ್ಚಿನ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತ ಸ್ಥಳದಿಂದ 50 ಮೀಟರ್ ಅಂತರದಲ್ಲಿ ಶಾಲೆ ಇದೆ ಎಂದರೆ ಸರಿ. ಕಾರಣ, ಸದರಿ ಶಾಲೆಯ ಹತ್ತಿರ ರೊಡ್ ರಸ್ತೆಯ ವೇಗನಿಯಂತ್ರಕ (ಹಂಪ್ಸ) ಇದೆ ಎಂಬುದು ಗೊತ್ತಿಲ್ಲ. ಕಾರಣ, ಅಪಘಾತ ಸ್ಥಳದಲ್ಲಿ ವಾಹನವನ್ನು ಅತೀ ವೇಗವಾಗಿ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಚಾಸಾ–6 ರವರು ಗೊಬ್ಬರ ತರಲು ನರಗುಂದ ಪಟ್ಟಣಕ್ಕೆ ಹೋಗಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕುಳಗೇರಿ ಪಟ್ಟಣದ 2–3 ಕಿ ಮೀ ಅಂತರದಲ್ಲಿ ಗೊಬ್ಬರದ ಅಂಗಡಿಗಳು ಹಾಗೂ 4–5 ಕಿ ಮೀ ಅಂತರದ ಕೊಣ್ಣೂರು ಗ್ರಾಮದಲ್ಲಿ ಗೊಬ್ಬರದ ಅಂಗಡಿಗಳು ಇದ್ದರೂ, ನರಗುಂದಕ್ಕೆ ಬರುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಪೊಲೀಸ್ ಠಾಣೆಯಲ್ಲಿ ಆರೋಪಿತನನ್ನು ತೋರಿಸಿರುತ್ತಾರೆ ಎಂದು , ಆ ಸಮಯದಲ್ಲಿ ಆರೋಪಿತನು ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–6 ರವರ ರಸ್ತೆಯ ನಿಯಮಗಳನ್ನು ಪಾಲಿಸಲು ಅಜಾಗುರುಕತೆಯಿಂದ ವಾಹನ ಚಲಾಯಿಸಿ ಬಸ್ಸಿಗೆ ಅಪಘಾತ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ–6 ರವರು ಸಂಬಂಧಿ ಯಾಗಿರುವುದರಿಂದ ಅವರಿಗೆ ಪರಿಹಾರ ಕೋಡಿಸಲು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಒ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ